# ಮತಸಮನ್ವಯ

ಕುವೆಂಪು ಅವರು 'ಮನುಜಮತ ವಿಶ್ವಪಥ' ಎಂದು ಹೇಳಿದ್ದು ಸರಿಯಷ್ಟೆ. ಇಲ್ಲಿ 'ಮನುಜ' ಎಂದರೆ ಮನುಷ್ಯರು. 'ಮತ' ಎಂದರೆ ಅಭಿಪ್ರಾಯ ಎಂದು ಸ್ಥೂಲವಾಗಿ ಇಟ್ಟುಕೊಳ್ಳಬಹುದು. ನಮ್ಮ ಅಭಿಪ್ರಾಯ, ನಮ್ಮ ದೃಷ್ಟಿಯೆಂದೇ ಇದರ ಅರ್ಥ. 'ವಿಶ್ವಪಥ' ಅಂದರೆ, ಸಮಗ್ರತೆಯ ಕಡೆಗೆ ಹೆಜ್ಜೆ ಹಾಕಬೇಕೆಂಬುದು ಇಲ್ಲಿಯ ಸೂಚಿತಾರ್ಥ. ಇಲ್ಲಿ 'ಮತ' ಎಂಬ ಮಾತಿದೆಯಷ್ಟೆ. ನಾವು ಸಾಮಾನ್ಯವಾಗಿ 'ವೋಟು' ಎಂಬ ಇಂಗ್ಲಿಷ್ ಶಬ್ದಕ್ಕೆ ಸಮಾನಾರ್ಥವಾಗಿ ಬಳಸುತ್ತಿದ್ದೇವೆ. ಶಬ್ದಕೋಶದ ಪ್ರಕಾರ 'ಮತ' ಎಂಬುದನ್ನು ವಿಶೇಷಣವಾಗಿಯೂ ನಾಮಪದವಾಗಿಯೂ ಬಳಸಲಾಗುತ್ತಿದೆ. ಇದು ಸಂಸ್ಕೃತ ಪದ. ವಿಶೇಷಣವಾಗಿ ಹೊಗಳಲ್ಪಟ್ಟ, ತರ್ಕಿಸಲ್ಪಟ್ಟ, ಗುರಿಯಿಟ್ಟ – ಎಂಬ ಅರ್ಥಗಳಿದ್ದರೆ; ನಾಮಪದವಾಗಿ – ಅಭಿಪ್ರಾಯ, ಆಶ್ರಯ, ಜಾತಿ, ಪಥ, ಅನುಮತಿ, ಆಲೋಚನೆ, ತತ್ತ್ವ, ಉಪದೇಶ – ಇಷ್ಟು ಅರ್ಥಗಳೂ ಉಂಟು.

'ಮತ' ಎಂಬುದಕ್ಕೆ ವೈಯಕ್ತಿಕ ಅಭಿಪ್ರಾಯ ಎಂಬುದಂತೂ ಸ್ಪಷ್ಟವಾಯಿತು. ಇಂಗ್ಲಿಷಿನಲ್ಲಿ ಇದು 'ರಿಲೀಜಿಯನ್' ಎಂಬುದಕ್ಕೆ ಸಮಾನಾರ್ಥಕ ಪದವಾಗಿ ಬಳಸಲಾಗುತ್ತಿದೆ. ಕೆಲವೊಮ್ಮೆ 'ಧರ್ಮ'ಕ್ಕೆ ಸಂವಾದಿಯಾಗಿಯೂ ಬಳಸುವುದುಂಟು. ಕುವೆಂಪು ಅವರು ಒಂದು ಕಡೆ ಸ್ಪಷ್ಟವಾಗಿ 'ಮತ' ಎಂಬುದು ವೈಯಕ್ತಿಕ ಅಥವ ವ್ಯಷ್ಟಿ ತತ್ತ್ವವೆಂದೂ 'ಧರ್ಮ' ಎಂಬುದು ಸಾರ್ವತ್ರಿಕ ಅಥವ ಸಮಷ್ಟಿತತ್ತ್ವವೆಂದೂ ಹೇಳಿದ್ದಾರೆ. ನಾವು ಈ ಅಭಿಪ್ರಾಯದ ದೃಷ್ಟಿಯಿಂದಲೇ 'ಮನುಜಮತ ವಿಶ್ವಪಥ' ಎಂಬ ಹೇಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು.

ಕುವೆಂಪು ಅವರು ತಮ್ಮ 'ದರ್ಶನ'ವನ್ನು ಅನೇಕ ತತ್ತ್ವಾಲೋಚನೆಗಳಿಂದ ರೂಪಿಸಿಕೊಂಡವರು. ಕಳೆದ ಶತಮಾನದ ಪ್ರಾರಂಭಕ್ಕೂ ಮೊದಲು ಶ್ರೀ ರಾಮಕೃಷ್ಣ ಪರಮಹಂಸರು 'ಮತ ಸಮನ್ವಯ'ದ ದಾರಿಯನ್ನು ತೋರಿಸಿದ್ದರು. ಅದು ಕುವೆಂಪು ಅವರ ಮೇಲೆ ತುಂಬಾ ಪ್ರಭಾವ ಬಿದ್ದಿರುವುದನ್ನು ನಾವು ಕಾಣುತ್ತೇವೆ. ಆಧುನಿಕ ಭಾರತವು ಎಚ್ಚೆತ್ತುಕೊಂಡಾಗ ಬಂಗಾಳವು ಮೊದಲು ಎಚ್ಚರಗೊಂಡು 'ಸರ್ವಸಮನ್ವಯ' ದೃಷ್ಟಿಯನ್ನು ಸಾರಿತು. ಆರ್ಯಸಮಾಜ, ಬ್ರಹ್ಮಸಮಾಜ, ರಾಮಕೃಷ್ಣಮಿಷನ್ ಈ ಕೆಲಸಗಳನ್ನು ಶ್ರದ್ಧಾಪೂರ್ವಕವಾಗಿ ಮಾಡಿದವು. ಸ್ವಾಮಿ ವಿವೇಕಾನಂದರು ಇದಕ್ಕೊಂದು ತಾತ್ತ್ವಿಕರೂಪವನ್ನು ಕೊಟ್ಟರು. ಅನಂತರ ಭಾರತವು ಸ್ವತಂತ್ರವಾಯಿತು. ಆಗ ಮತೀಯ ಗಲಭೆಗಳು ಉಂಟಾದುವು. ಮಹಾತ್ಮಗಾಂಧೀಜಿ ಅವರು 'ಮತಸಮನ್ವಯ'ದ ದೃಷ್ಟಿಯನ್ನು ಜನತೆಯಲ್ಲಿ ಬಿತ್ತಿದರು. ಹಿಂದೂ ಮುಸ್ಲಿಂ, ಕ್ರೈಸ್ತ, ಜುರಾಷ್ಟಿಯನ್ ಮುಂತಾದವರು ಒಂದಾಗಲು, ಕೂಡಿ ಬಾಳುವುದರ ಕಡೆಗೆ ಗಾಂಧೀಜಿ ಅವರು ಬಹುವಾಗಿ ಶ್ರಮಿಸಿದರು. ಅವರು 'ರಘುಪತಿ ರಾಘವ ರಾಜಾರಾಮ್, ಪತಿತಪಾವನ ಸೀತಾರಾಮ್, ಈಶ್ವರ, ಅಲ್ಲಾ ತೇರೇನಾಮ್' ಎಂಬ ಪ್ರಾರ್ಥನೆಯ ಮಂತ್ರದಲ್ಲಿ ಮತಸಮನ್ವಯದ ದೃಷ್ಟಿಯನ್ನು ಕಾಣುತ್ತೇವೆ.

ಪ್ರತಿಯೊಂದು ರಾಜ್ಯದಲ್ಲೂ ಹಿಂದೂ–ಮುಸ್ಲಿಂ ಐಕ್ಯತೆಯ ನೆಲೆಗಳುಂಟು. ಸ್ವಾತಂತ್ರ್ಯಪೂರ್ವದಲ್ಲಿ ಇಂಥ ಐಕ್ಯತೆಯ ಕುರುಹುಗಳನ್ನು ನಾವು ಕಾಣುತ್ತೇವೆ. ಅಪವಾದ ಎಂಬಂತೆ ಒಂದೆರಡು ಅನೈಕ್ಯತೆಯ ಕುರುಹುಗಳುಂಟು. ನಾವೀಗ 'ಕಚ್ಚಾಡುವವರನು ಕೂಡಿಸಿ ಒಲಿಸು' ಎಂಬ ಕುವೆಂಪು ಅವರ ವಾಣಿಯನ್ನು ಜನತೆಯ ಮನಸ್ಸಿನಲ್ಲಿ ಮೂಡಿಸಬೇಕಾಗಿದೆ. ಇದು ಭಾರತದ ಪ್ರಜೆಯ ಅಖಂಡ ದೃಷ್ಟಿಯಾಗಿರಬೇಕಾಗುತ್ತದೆ. ಬೇಂದ್ರೆಯವರು ತಮ್ಮೊಂದು ಕವನದಲ್ಲಿ 'ತಾಳಬೇಕು, ಮೇಳಬೇಕು ಜನರಲಿ' ಎಂದಿದ್ದಾರೆ. ಆದರೆ, ನಾವು ಆಕಡೆ ದೃಷ್ಟಿಯನ್ನು ಹರಿಸಿಲ್ಲ. ಭಾರತವು ಭೌಗೋಳಿಕವಾಗಿ 'ಜಂಬೂದ್ವೀಪ'ವಾಗಿತ್ತು. ಭಾರತದ ಆಚೆಗೆ ನಾವು ನೆಲೆಸಿದ್ದೆವು; ನಮ್ಮ ಸಂಸ್ಕೃತಿ ಹರಡಿ ತುಂಬಿತ್ತು. ಆದರೆ, ರಾಜಕೀಯ ಕಾರಣವಾಗಿ 'ವಿಶ್ವಭಾರತ'ವು 'ಖಂಡಭಾರತ'ವಾಗುತ್ತ ಕಾಲಕ್ರಮೇಣ ಕುಸಿಯಿತು. ಆದರೆ, ಸಾಂಸ್ಕೃತಿಕ ದೃಷ್ಟಿಯಿಂದ ನಾವು 'ಅಖಂಡ' ದೃಷ್ಟಿಯನ್ನು ಈಗಲೂ ಹೊಂದಿದ್ದೇವೆ.

ಭಾರತೀಯ ಸಮಾಜವು ಅಖಂಡತೆಯನ್ನೇ ತನ್ನ ದಾರಿಯೆಂದು ತಿಳಿದುಕೊಂಡಿದೆ. ಕಲೆಗಳಲ್ಲಿ, ಆಚರಣೆಗಳಲ್ಲಿ, ಸಾಹಿತ್ಯದಲ್ಲಿ ಭಾಷೆಯ ನೆಲೆಯಲ್ಲಿ ನಾವು 'ಸಮನ್ವಯ' ದೃಷ್ಟಿಯನ್ನು ಇಟ್ಟುಕೊಂಡಿದ್ದೇವೆ. ಸಂಗೀತ ಕ್ಷೇತ್ರದಲ್ಲಿ ಉತ್ತರಾದಿ ಸಂಗೀತರಾಗಗಳು; ದಕ್ಷಿಣಾದಿ ಸಂಗೀತಗಳಾಗಿವೆ. ದಕ್ಷಿಣಾದಿ ಸಂಗೀತರಾಗಗಳು; ಉತ್ತರಾದಿ ಸಂಗೀತರಾಗಗಳಾಗಿ ರೂಪಾಂತರಗೊಂಡಿವೆ. ಔತ್ತರೇಯರು ದಾಕ್ಷಿಣಾತ್ಯರ ಜತೆ ಬೆರೆತುಕೊಂಡುಬಿಟ್ಟಿದ್ದಾರೆ. ಆದರೆ, ಆಗಾಗ್ಗೆ 'ಒಡಕು ಬಿಂಬ' ಕಾಣಿಸಿಕೊಳ್ಳುವುದುಂಟು. ನಾವು ಈ 'ಬಿಂಬ'ದಿಂದ ಹೊರಬರಬೇಕಾಗಿದೆ. ರಾಜಕಾರಣವು 'ಮತಸಮನ್ವಯ'ದ ದೃಷ್ಟಿಗೆ ಅನುಗುಣವಾಗಿ ಬೆಳೆಯಬೇಕಾಗಿದೆ.

ನಮ್ಮ ಈ ಕಾಲವು 'ಮತಸಮನ್ವಯ'ದ ಪುನರುಜ್ಜೀವನದ ಔಪಮ್ಯವನ್ನು ರಾಷ್ಟ್ರದಲ್ಲಿ ಸಾರಬೇಕಾಗಿದೆ. ನಾವು ವ್ಯಕ್ತಿತತ್ತ್ವವನ್ನು ನೀಗಬೇಕಾಗಿದೆ. ನಾವು ಬಳಸುವ ಭಾಷೆಯಲ್ಲಿ 'ವ್ಯಕ್ತಿಮೆ'ಯು ನೀಗುವುದು ಅವಶ್ಯವಿದೆ. ನಮ್ಮ ಯೋಜನೆಗಳು 'ಸರ್ವ' ಭಾವನೆಗಳ ಅಡಿಪಾಯದಲ್ಲಿ ರೂಪುಗೊಳ್ಳಬೇಕಾಗಿದೆ. ಕುವೆಂಪು, ಬೇಂದ್ರೆ, ಪುತಿನ ಮುಂತಾದ ನಮ್ಮ ಕವಿಗಳೂ ಲೇಖಕರೂ ಸಾರಿದ್ದು ಇದನ್ನೇ. 'ಮತ'ವು ಕಳೆದು ಅಲ್ಲಿ 'ಧರ್ಮ'ವು ಅರಳಬೇಕಾಗಿದೆ. ನಾವು ಕುಡಿಯುವ ನೀರು ಒಂದೇ. ನಾವು ತುಳಿಯುವ ಭೂಮಿ ಒಂದೇ. ನಾವು ಸೇವಿಸುವ 'ಗಾಳಿ'ಯೂ ಒಂದೇ. ಹೀಗೆ ಭೂತಪ್ರಪಂಚವು ಒಂದೇ ಆಗಿರುವಾಗ ನಾವು ಬೇರೆಬೇರೆಯಾಗಿಯೇ ಬದುಕುವುದು ಎಷ್ಟು ಸರಿ? ಭೇದವು ರಾಷ್ಟ್ರವನ್ನು ಛಿದ್ರೀಕರಣಗೊಳಿಸುತ್ತದೆ; ಅಭೇದವು ರಾಷ್ಟ್ರವನ್ನು ಭದ್ರಗೊಳಿಸುತ್ತದೆ. ರಾಜ್ಯ–ರಾಷ್ಟ್ರಗಳು ಸಕೀಲ ಸಂಬಂಧಗಳಾಗಿ ಹೊಂದಿಕೊಳ್ಳಬೇಕು. ಅಲ್ಲಿ 'ಸಮನ್ವಯತೆ'ಯ ಅಖಂಡದೃಷ್ಟಿ ಪ್ರಧಾನವಾಗಿರಬೇಕು.

ತಥಾಗತನಾದ ಬುದ್ಧನು 'ಸಬ್ಬಂ ಭವತು ಮಂಗಳಂ' ಎಂದು ಹೇಳಿದನಷ್ಟೆ. ಮಹರ್ಷಿ ವ್ಯಾಸರು 'ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ' ಎಂದರು. ಭಾಷೆ ಬೇರೆ. ಆದರೆ, ಭಾವ ಒಂದೇ. ನಮ್ಮ ಬದುಕು, ಭಾವೈಕ್ಯತೆಯ ದಾರಿಯನ್ನು ಹಿಡಿದು 'ಮತ ಸಮನ್ವಯ'ದ ನೆಲೆಯಲ್ಲಿ ನಮ್ಮ ಸಮಾಜವು ಬೆಳೆಯಬೇಕಾಗಿದೆ. ನಮ್ಮ ಖಂಡದೃಷ್ಟಿಯ ಕಣ್ಣಿನ ಪರೆಯನ್ನು ಕಳಚಿ ಅಲ್ಲಿ ಅಖಂಡದೃಷ್ಟಿಯ ಒಳಗಣ್ಣನ್ನು ತೆರೆಯಬೇಕಾಗಿದೆ. ಈ ದೃಷ್ಟಿಯಿಂದ ನಮ್ಮದು ಅಖಂಡದೃಷ್ಟಿಯಾಗಿರಲಿ. 'ಸರ್ವೇ ಸಂತು ನಿರಾಮಯಾಃ' ಎಂಬ ಆರ್ಯೋಕ್ತಿ ನಮ್ಮ ಧಮನಿ ಧಮನಿಗಳಲ್ಲಿ ಪ್ರವಹಿಸುತ್ತಿರಲಿ.

■ **ಪುರಂಜೀವಿ**

## ಮಾತೇ ಮುತ್ತು

- ಜೀವನ ಸುಂದರ ಸ್ವಪ್ನವೂ ಅಲ್ಲ, ಕಹಿ ಬೇವೂ ಅಲ್ಲ; ಬೇವು–ಬೆಲ್ಲಗಳ ಮಿಶ್ರಣ ಅದು. ಅರೆ ಕಹಿ, ಅರೆ ಸಿಹಿ, ಸ್ವಲ್ಪ ನಗು, ಕೊಂಚ ಅಳು; ತುಸು ಕೋಪ, ನಸು ತಾಪ. ನೀನದನ್ನು ನಗುನಗುತ್ತ ನುಂಗಬೇಕು, ನೋವನ್ನು ನಗೆಯಾಗಿ ಪರಿವರ್ತಿಸಿಕೊಳ್ಳಬೇಕು.

  –ನಾಡಿಗೇರ ಕೃಷ್ಣರಾಯ

- ಬಂದ ಸುಖವ ಬಿಡಬೇಡ, ಬಾರದುದ ಬೇಕೆಂದು ಬಯಸಬೇಡ.

  –ರತ್ನಾಕರವರ್ಣಿ

- ನಮ್ಮನ್ನು ನಾವು ಸರಿಪಡಿಸಿಕೊಂಡರೆ, ಇಡೀ ಜಗತ್ತನ್ನು ಸರಿಪಡಿಸಿದಂತೆ, ನಮ್ಮಲ್ಲಿ ನಾವು ಪರಿವರ್ತನೆ ತಂದುಕೊಂಡರೆ ಜಗತ್ತಿಗೇ ಬೆಳಕು ನೀಡಿದಂತೆ.

  –ರಮಣ ಮಹರ್ಷಿ

- ದುಃಖಕ್ಕೆ ಸಿಕ್ಕಷ್ಟು ಬೇಗ ಕಾರಣ ಸುಖಕ್ಕೆ ಸಿಗುವುದಿಲ್ಲ.

  –ಪಿ. ಲಂಕೇಶ್

- ತನ್ನನ್ನು ತಾನು ಗುರುತಿಸಿಕೊಂಡು, ತನ್ನ ವಿಶೇಷವನ್ನು ಶಕ್ತಿಯ ಪರಿಮಿತಿಯನ್ನು ಅರಿತು, ತನ್ನತನದ ವೈಶಿಷ್ಟ್ಯವನ್ನು ಬೆಳೆಸಿಕೊಳ್ಳುತ್ತಾ ಉಳಿದವರ ಜೊತೆಗೆ ಸಮಭಾವದಿಂದ ಸಹಕರಿಸಲು ಕಲಿಸುವುದೇ ನಿಜವಾದ ಸಂಸ್ಕೃತಿಯ ಲಕ್ಷಣ.

  –ಎಂ.ಗೋಪಾಲಕೃಷ್ಣ ಅಡಿಗ

- ಕೀರ್ತಿಯನ್ನು ಜೀರ್ಣಿಸಿಕೊಳ್ಳುವುದು ಬಹಳ ಕಷ್ಟ.

  –ಕುವೆಂಪು